**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ.ಸಿ. ಸಂಖ್ಯೆ: 473/2023**

ಪ್ರಾಸಾ – 1

ಚಾಸಾ – 1

**ಸಾಕ್ಷಿಯು ದಿಃ 28.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಶಾರದಾ ಎಂ. |
| ತಂದೆಯ ಹೆಸರು | : | ಮಲ್ಲೇಶ |
| ವಯಸ್ಸು | : | 29 ವರ್ಷ |
| ವೃತ್ತಿ | : | ಗೃಹಿಣಿ |
| ವಾಸಸ್ಥಳ | : | ಗುಂಡ್ಲುಪೇಟೆ |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ :–**

ಚಾಸಾ 1 ಮತ್ತು 2 ನನ್ನ ತಂದೆ ತಾಯಿ. ಚಾಸಾ 4 ನನ್ನ ಅಣ್ಣ. ಚಾಸಾ 5 ರಿಂದ 12 ಗೊತ್ತು. 1ನೇ ಆರೋಪಿ ನನ್ನ ಗಂಡ, 2ನೇ ಆರೋಪಿ 1ನೇ ಆರೋಪಿಯ ತಾಯಿ ಮತ್ತು 3 ನೇ ಆರೋಪಿ ಆತನ ತಮ್ಮ. ದಿಃ 24.05.2020 ರಂದು 1ನೇ ಆರೋಪಿಯೊಂದಿಗೆ ನನ್ನ ವಿವಾಹವಾಗಿರುತ್ತದೆ. ನಮ್ಮ ಮದುವೆಯ ನಂತರ ನಾನು ಆರೋಪಿತರ ಮನೆಯಲ್ಲಿ ನನ್ನ ವೈವಾಹಿಕ ಜೀವನವನ್ನು ಆರಂಭಿಸಿರುತ್ತೇನೆ. ಅದರ ಫಲವಾಗಿ ನಮಗೆ ಕುಶಾಲ ಗೌಡ ಎಂಬ 5 ವರ್ಷದ ಮಗನಿದ್ದಾನೆ. ಆರೋಪಿಗಳು ನನಗೆ ಯಾವುದೇ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡಿಲ್ಲ. ಮದುವೆಯ ಪೂರ್ವದಲ್ಲಿ ಯಾವುದೇ ವರದಕ್ಷಿಣೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ದೂರಿನಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರ್ತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ,

ಪಂಚನಾಮೆಯನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರ್ತಿಸಲಾಯಿತು. ಅಮಾನತ್ತು ಪಂಚನಾಮೆಯಲ್ಲಿ ಸಾಕ್ಷಿಯು ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಅಮಾನತ್ತು ಪಂಚನಾಮೆಯನ್ನು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3(ಎ) ಎಂದು ಗುರ್ತಿಸಲಾಯಿತು. ಸದರಿ ಸಹಿಗಳನ್ನು ಯಾವಾಗ ಎಲ್ಲಿ ಮಾಡಿದ್ದೇನೆ ನನಗೆ ಗೊತ್ತಿಲ್ಲ. ಆರೋಪಿಗಳ ವಿರುದ್ಧ ನಾನು ಯಾವುದೇ ದೂರು ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಮುಚ್ಚಿದ ಲಕೋಟೆಯನ್ನು ಒಡೆದು ದಂಡ ಪ್ರಕ್ರೀಯಾ ಸಂಹಿತೆ ಕಲಂ 164 ರ ಅಡಿಯಲ್ಲಿನ ಚಾಸಾ 1 ರವರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು, ಅದರಲ್ಲಿದ್ದ ಸಹಿಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 ಎಂದು, ಸಾಕ್ಷಿಯ ಸಹಿಯನ್ನು ನಿಪಿ 4(ಎ) ಎಂದು, ಅಂಚೆ ಲಕೋಟೆಯನ್ನು ನಿಪಿ 4(ಬಿ) ಎಂದು ಗುರ್ತಿಸಲಾಯಿತು. ಸದರಿ ಸಹಿಯನ್ನು ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಮಾಡಿರುತ್ತೇನೆ ಆದರೆ ಅದರಲ್ಲಿ ಏನು ಬರೆದಿದೆ ಎಂದು ನೆನಪಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ)

**ಪಾಟೀ ಸವಾಲು :- ಮಾನ್ಯ ಎಪಿಪಿಯವರಿಂದ :-**

ನನ್ನ ಮದುವೆಯ ನಂತರ ನಾನು 1ನೇ ಆರೋಪಿಯೊಂದಿಗೆ ವಾಸವಾಗಿದ್ದು ಸುಮಾರು 6 ತಿಂಗಳವರೆಗೆ ಆರೋಪಿಗಳು ಚೆನ್ನಾಗಿ ನೋಡಿಕೊಂಡಿದ್ದು ನಂತರ 1ನೇ ಆರೋಪಿ ಹಲ್ಲೆ ಮಾಡಿ ವರದಕ್ಷಿಣೆ ಹಣವನ್ನು ತರುವಂತೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದು, 2 ಮತ್ತು 3ನೇ ಆರೋಪಿಗಳು ಸಹ 1ನೇ ಆರೋಪಿಗೆ ಬುದ್ದಿವಾದ ಹೇಳದೆ ನನಗೆ ದೈಹಿಕ ಮಾನಸಿಕ ಹಿಂಸೆ ನೀಡಿರುತ್ತಾರೆ, ದಿಃ 14.05.2023ರ ರಾತ್ರಿ ನಾನು ಬೆಟ್ಟೆಗೌಡನ ಹುಂಡಿ ಗ್ರಾಮದ ನಮ್ಮ ಮನೆಯಲ್ಲಿದ್ದಾಗ 1 ರಿಂದ 3ನೇ ಆರೋಪಿಗಳು ನನಗೆ ನಿಮ್ಮ ತವರು ಮನೆಯಿಂದ ವರದಕ್ಷಿಣೆ ಹಣವನ್ನು

ತೆಗೆದುಕೊಂಡು ಬಂದಿಲ್ಲ ಎಂದು ಗಲಾಟೆ ಮಾಡಿ ನನ್ನನ್ನು ನನ್ನ ಮಗುವಿನ ಜೊತೆ ಬೆಳಗಿನ ಜಾವ 6.30 ಗಂಟೆ ಸಮಯದಲ್ಲಿ ಮನೆಯಿಂದ ಹೊರಹಾಕಿರುತ್ತಾರೆ ಮತ್ತು ವರದಕ್ಷಿಣೆ ತರುವಂತೆ ಹಲ್ಲೆ ಮಾಡಿ ಮಾನಸಿಕ ದೈಹಿಕ ಹಿಂಸೆ ನೀಡಿರುತ್ತಾರೆ ಎಂದು ಈಗ ಓದಿ ಹೇಳಿದಂತೆ ನಿಪಿ 1 ರಂತೆ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಈ ದೂರಿನ ವಿಚಾರವಾಗಿ ಪೊಲೀಸರು ದಿಃ 21.07.2023 ರಂದು ನಾನು ತೋರಿಸಿದ ಸ್ಥಳದಲ್ಲಿ ಚಾಸಾ 9 ಮತ್ತು 10 ರ ಸಮಕ್ಷಮ ನಿಪಿ 1 ರಂತೆ ಸಂಜೆ 5.15 ರಿಂದ 6.00 ಗಂಟೆಯವರೆಗೆ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

2. ದಿಃ 27.07.2023 ರಂದು ಚಾಸಾ 3 ಮತ್ತು 10 ರವರ ಸಮಕ್ಷಮ ಬೆಳಿಗ್ಗೆ 10.00 ರಿಂದ 10.45 ರ ಸಮಯದಲ್ಲಿ ನಿಪಿ 3 ರಂತೆ ಅಮಾನತ್ತು ಪಂಚನಾಮೆ ಜರುಗಿಸಿ ಮದುವೆ ಕಾಲದ ಫೋಟೋಗಳು, ಲಗ್ನ ಕುಂಡಲಿಗಳನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಿಃ 08.08.2023 ರಂದು ನ್ಯಾಯಿಕ ದಂಡಾಧಿಕಾರಿಗಳ ಮುಂದೆ ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ನೆನಪಿಲ್ಲ. ಆರೋಪಿಯೊಂದಿಗೆ ಪ್ರಕರಣ ರಾಜಿ ಮಾಡಿಕೊಂಡಿದ್ದೇನೆ ಎಂದರೆ ಸರಿ. ಆ ಕಾರಣದಿಂದ ನಿಪಿ 1 ರಿಂದ 4 ರಲ್ಲಿರುವ ವಿಚಾರಗಳು ಗೊತ್ತಿದದರು ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು :- ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ನುಡಿದಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ